

ಮುಂಡರಗಿ ತಾಲ್ಲೂಕಿನಲ್ಲಿರುವ ಹಮ್ಮಿಗಿ ಬ್ಯಾರೇಜ್

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

ವಿಠಲಾಪೂರ ರಸಲಿಂಗ, ಬಿದರಳ್ಳಿ ರೇಣಕವ್ವ, ಇಂಡೊ ಗ್ರೀಕ್ ಮಾದರಿ ಕಟ್ಟಿದ ಗುಮ್ಮಗೋಳ ಗೋಣಿಬಸವೇಶ್ವರ ದೇವಸ್ಥಾನ ಪುಷ್ಕರಣಿ ಮೇಲೆ ನಿಂತೈತಿ, ಇನ್ ಡಂಬಳ ವಿಕ್ಟೋರಿಯಾ ರಾಣಿ ಕಾಲದ ದೊಡ್ ಕೆರಿ, ದೊಡ್ಡಬಸಣ್ಣ, ಬ್ರಿಟೀಷರ ಕಾಲ್ದ ಬಂಗ್ಲೆ, ಅಂದಿನ ಕಾಲದಾಗ ಬೌದ್ಧರು ವಾಸಿಸುತ್ತಿದ್ದ ಜಪದ ಬಾವಿ ಅದರ ಅಂದಾ ನೋಡ್ ಬೇಕು, ಚಾಲುಕ್ಯರ ಕಾಲದ ಮಂಟಪ ನಡುವೆ ನೀರಿನ ಹೊಂಡ ಸುತ್ತಲೂ ಋಷಿಗಳು ಧ್ಯಾನಕ್ ಕೂಡೋ ಖಾನೆ ಖಾನೆ ಸಣ್ಣ ಮನಿಗಳು ನೋಡಾಕ ಎರ್ಡ್ ಕಣ್ಣ್ ಸಾಲಂಗಿಲ್ಲ ನೋಡ್ರಿ... ಈಸು ಬಿದ್ದ ಹುಡುಗರಿಗೆ ಆಟ. ದಾರಿಗುಂಟ ಹೊಂಟ್ರ ಪೇರಲ ಬಾರಿ ನೀರಲ ಹಣ್ಣುಗಳ ಊರ್ ಐತಿ ಈ ಡಂಬಳ. ಮುಂದಕ್ ಎಂಟತ್ತು ಕಿ.ಮಿ. ದೂರ ಹೋದ್ರ ನಂದಿವೇರಿಮಠ, ಅದರತ್ತತ, ಬಂತು ನೋಡ್ರಿ ವಿಶ್ವದಲ್ಲಿಯೇ ಶುದ್ಧಗಾಳಿ ಬೀಸುವ ಕಪ್ಪತಗುಡ್ಡದ ಗಾಳಿಗುಂಡಿ ಬಸಪ್ಪನ ಗುಡಿ, ಅದರ ನೆತ್ತಿಯೊಳಗೆ ಬರ್ರನೆ ತಾಸಿಗೆ ನೂರೀಪ್ಪತ್ತು ಕಿ.ಮಿ. ಸ್ಪೀಡಾಗಿ ಬೀಸೋ ಗಾಳಿ ಫೇಮಸ್ ಆಗೀದೆ ನೋಡ್ರಿ. ಹಿಂದಕ ಈ ಬಹಳಷ್ಟು ಹವಾ ಎದ್ದಿರುವ ಚಿನ್ನದ ನಿಕ್ಷೇಪ ಬ್ರಿಟೀಷ ಕಂಪನಿಗಳು ಬಂಗಾರ ಮತ್ ಮೈನ್ಸ್ ತೆಗೆದ ದೊಡ್ಡ ದೊಡ್ಡ ಕೊಳ್ಳಗಳ ಅದಾವು, ಹಳೆ ಮಠ, ಕಾರಿಸಿದ್ದಪ್ಪನ ಪಡಿ, ಗಂಗೀಭಾವಿ, ನೂರಾ ಒಂದು ಭಾವಿ ನೂರಾ ಒಂದು ಗುಡಿ ಗುಡ್ಡದಾಗ ತುಂಬಿಕೊಂಡಾವು ಕಾಲಿದ್ದಾವ ಕಪ್ಪತಗುಡ್ಡ ನೋಡಬೇಕು.

ಎಲ್ಲಾಕಿಂತ್ ಜಾತಿ ಮತ ಇಲ್ದ ಒಟ್ಟಾಗಿ ಕುಂತು ಉಣ್ಣೋ ಡಂಬಳ ಖಡಕ್ ರೊಟ್ಟಿ ಜಾತ್ರಿ. ಇದ್ಕ್ ಕೋಮು ಸೌಹಾರ್ದ ಪ್ರಶಸ್ತಿ ದಿಲ್ಲಿಯಿಂದ ಕೊಟ್ರು. ಈಗ ನಮ್ಮ ತೋಂಟದಾರ್ಯ ಸಿದ್ಲಿಂಗಸ್ವಾಮಿಗಳಿಲ್ಲ ಖರೇ. ಅವ್ರು ಬಿತ್ತಿದ ಭಾವೈಕ್ಯದ ಬೀಜ ಮೊಳಕೆ ಒಡೆದು ಎಲ್ಲ ಮಂದಿ ಕೂಡತಾರ. ತೇರು ಹೊಂಟ ಕೂಡ್ಲೇ ಮರುದಿನ ಮಠದ ಬಯಲಾಗ ಸಾಲಾಗಿ ಬಿಳಿಜ್ವಾಳದ ರೊಟ್ಟಿ ಅದರ ಮ್ಯಾಲೆ ಪುಂಡಿಪಲ್ಲೆ ಸೊಪ್ಪು, ಶೆಂಗಾ ಕಾಳು, ಗಜ್ಜರಿ, ಕಾಯಿಪಲ್ಲೆ ಹಾಕಿದ ಭಾಜಿ ತಿಂದು ಅದ ರೊಟ್ಟಿ ಮ್ಯಾಗೆ ಬಳ್ಳೊಳ್ಳಿ ಮೊಸರು ಕಲಿಸಿದ ಅನ್ನ ಅದರಾಗ ಅಗಸಿಚಟ್ನಿ ಹಾಕ್ಕೊಂಡು ಭರತ ಹುಣ್ಣಿಮೆ ಬೆಳದಿಂಗಳ ಬೆಳಕಿನ್ಯಾಗ ಕುಂತು ತಿನ್ನಾಕ ಹತ್ತಿದರ, ಒಳಗ ಒಬ್ರು ಕುಂತು ಒಂದಾ ಸಮಾ ಜಗ್ಗಿದಂತಾಗುತ್ತ ಅಂತಾ ರುಚಿ ಎಲ್ಲಿ ಸಿಗೋದಿಲ್ಲ. ಈ ಪರಂಪರೆ ಈಗಿನ ಡಾ. ತೋಂಟದ ಸಿದ್ದರಾಮ ಶ್ರೀಗಳು ಮುಂದುವರೆಸಿ, ಕಲೆ ಸಾಂಸ್ಕೃತಿಕ, ಗ್ರಾಮೀಣ ಕುಸ್ತಿ ಕಲ್ಲೆತ್ತುವ ಕಸರತ್ತುಗಳಿಗೆ ಸಾಥ್ ಕೊಟ್ಟಾರ.

ಇದಾ ಮಠದ ಸಿದ್ದಲಿಂಗಸ್ವಾಮಿಗಳು, ನಾಡಿನಾಗ ಮೂಢನಂಬಿಕೆ ವಿರುದ್ಧ ಮತ್ ಬಸವ ತತ್ವದ ಬೆಳಕು ರಾಜ್ಯಕ್ಕ್ ಚೆಲ್ಲೊ ಬೈಲೂರ ಮಠದ ನಿಜಗುಣಾನಂದ ಸ್ವಾಮಿಗಳನ್ನು ಕರೆತಂದು ಆಷಾಡದಾಗ ಬಸವತತ್ವದ ಪ್ರವಚನ ಮಾಡಿ ಜನರನ್ನ ಎಚ್ಚರಿಸೋ ಸ್ವಾಮಿಗಳು ಇಲ್ಲಿ ಮನೆ ಮಾತಾಗಿದ್ದಾರ, ಅವರ ಒಂದೊಂದು ಮಾತು ನಿಚ್ಚಳ ಇದ್ದು ಸುಮ್ಮ ಸುಮ್ಮನೆ ಮೋಸಕ್ಕ ಗೊಡ್ಡ್ ಸಂಪ್ರದಾಯಕ್ಕ ಬಿದ್ದು ರೊಕ್ಕ ಕಳಕೊಬ್ಯಾಡ್ರಿ ಎಂದು ಹೇಳಿಯೇ ಹೇಳ್ತಾರ. ಹೀಗಾಗಿ ಇಲ್ಲೊಂದು ತೋಂಟದಾರ್ಯ ಶಾಖಾ ಮಠ ಜಾಗೃತ ಕೇಂದ್ರಾಗಿ ಮಾರ್ಪಟ್ಟಿದೆ ನೋಡ್ರಿ.

ಎಲ್ಲಾ ನಮೂನಿ ಭಕ್ತರು ತುಂಬ್ಯಾರ ಡೋಣಿ. ಆಲೂರಾಗ ಮುಳ್ಳಗದ್ದುಗೆ ಸ್ವಾಮ್ಯಾರು, ಗುಡ್ಡದ ಗಾವಟಿ ಔಷಧಿ ಕೊಡೋ ಸಾಧುಗಳು, ಒಂದಾ ಎರಡಾ, ಮುಗಿಯೋದಿಲ್ಲ. ಕಲಕೇರಿ, ಡಂಬಳ, ಯಕಲಾಸಪೂರ ಹಿರೇವಡ್ಡಟ್ಟಿ ಹೀಂಗ್ಯ ಹಳ್ಯಾಗ ಹಿಂದು ಮುಸ್ಲಿಂ ಜನಾ ಕೂಡಿ ಅಲೈಹಬ್ಬ ಮೊಹರಂ ಆಚರಿಸೋದ. ಹೆಜ್ಜಿ ಕುಣಿತ ಇರೋದ.

ನೂರ್ ವರ್ಷ ತುಂಬಿದ ಅನ್ನದಾನೀಶ್ವರ ಶಿಕ್ಷಣ ಸಮಿತಿ ಶತಮಾನೋತ್ಸವ ಅಂದಿನ ಕಾಲಕ್ಕ ಬಡವರಿಗೆ ಬೋರ್ಡಿಂಗ್ ಮಾಡಿ ಕೃಷ್ಣರಾಜ ಒಡೆಯರ್ ಕರೆಯಿಸಿ ಸಾಲಿ ಓಪನಿಂಗ್ ಮಾಡಿಸಿದ್ರು. ಇವಾಗಿನ ಡಾ. ಅನ್ನದಾನೀಶ್ವರ ಶ್ರೀಗಳು ಸಾಹಿತಿಗಳಾಗಿ ನೂರಾ ಅರವತ್ತಕ್ಕೂ ಹೆಚ್ಚು ಪುಸ್ತಕ ಬರೆದು, ಇವರ ಇವ್ರ ಸಾಧನೆ ಕುರಿತ ಆರು ಮಂದಿ ಪಿಎಚ್ಡಿ ಪಡೆದಾರ ಅಂದ್ರ ಇವರ ವಿದ್ವತ್ ಶಕ್ತಿ ತಿಳಿತೈತಿ. ಬಡ ಮಕ್ಕಳಿಗೆ ಶಿಕ್ಷಣ ಕಡ್ಮಿ ದರದಲ್ಲಿ ಕೊಡೋದೇ ಇವರ ಗುರಿ. ಹೀಗಾಗಿ ಈ ಭಾಗಕ್ಕಿವರು ಮುಖ್ಯಗುರುವಾಗಿ, ಸಮಾಜದೊಳಗ ಬೆರಿತಿದ್ದಾರ.

ಒಟ್ಟಾರೆ ಇಲ್ಲಿ ಕವಿ, ಸಾಹಿತಿ, ನಾಟಕಕಾರರು, ರಂಗಭೂಮಿ ಕಲಾವಿದರು, ದೊಡ್ಡಾಟದ ಮಾಸ್ತರ, ಸಂಗೀತ ದಿಗ್ಗಜರು ಹೋರಾಟಗಾರರು, ಏನ್ ಬೇಕು ಎಲ್ಲಾರೂ ಅದಾರು. ಇಷ್ಟ ಕೇಳಿದ ಮಾಸ್ತರಿಗೆ ಇನ್ನೊಂದೆರಡು ದಿನ ಇರಾಕ್ ಮನೀ ಇರಲಿಲ್ಲ, ಮನೀಗ ಬಾ ಅಂದ್ರು ಕೇಳದ ಮಠದಾಗಿನ ಯಾತ್ರಿ ನಿವಾಸದ ಇದ್ದು ಪ್ರಸಾದ ಸೇವಿಸಿ ಹಳೆ ಮುಂಡರಗಿ ಹೊಸ ಮುಂಡರಗಿಗೆ ಕಂಪೇರ್ ಮಾಡಿದ್ರು.



ಮುಂಡರಗಿ ಅನ್ನದಾನೀಶ್ವರ ಮಠ